ಕರ್ನಾಟಕ ಸರ್ಕಾರ

ವಿತ್ತೀಯ ಕಾರ್ಯನೀತಿ ಸಂಸ್ಥೆ

ಕ್ರ.ಸಂ:ವಿಕಾಸಂ/ಸಿ/23/2019-20

ನಿರ್ದೇಶಕರ ಕಛೇರಿ,
ವಿತ್ತೀಯ ಕಾರ್ಯನೀತಿ ಸಂಸ್ಥೆ,
ಬೆಂಗಳೂರು-ಮೈಸೂರು ರಸ್ತೆ,
ಕೆಂಗೇರಿ ಅಂಚೆ, ಕೆಂಗೇರಿ, ಬೆಂಗಳೂರು-60
ದಿನಾಂಕ:15.06.2020.

# ಅಧಿಸೂಚನೆ

ವಿಷಯ : ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಸಂಶೋಧನಾ ಫೆಲೋ, ಸಂಶೋಧನಾ ಅಸೋಸಿಯೇಟ್ ಮತ್ತು ಸಂಶೋಧನಾ ಸಲಹೆಗಾರರ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

*****

ಸಂಶೋಧನಾ ಫೆಲೋ, ಸಂಶೋಧನಾ ಅಸೋಸಿಯೇಟ್ ಮತ್ತು ಸಂಶೋಧನಾ ಸಲಹೆಗಾರರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಮಾಡಲು, ಅರ್ಥಶಾಸ್ತ್ರದ ಯಾವುದೇ ವಿಭಾಗದಲ್ಲಿ ವಿಶೇಷ ಪರಿಣತಿ ಅಥವಾ ಬಿಸಿನೆಸ್ ಮ್ಯಾನೆಜ್‌ಮೆಂಟ್, ವಾಣಿಜ್ಯ ಶಾಸ್ತ್ರ, ಸಂಖ್ಯಾ ಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಇನ್‌ಫರ್ಮೇಶನ್ ಟೆಕ್ನಾಲಾಜಿ, ಮಾನವ ಸಂಪನ್ಮೂಲಗಳು, ಸಾರ್ವಜನಿಕ ಆಡಳಿತ, ಡೆವಲೆಪ್‌ಮೆಂಟ್ ಸ್ಟಡೀಸ್, ಪಾಪುಲೇಶನ್ ಸ್ಟಡೀಸ್, ಪಬ್ಲಿಕ್ ಪಾಲಿಸಿ, ಅಗ್ರಿಕಲ್ಚರ್ ಎಕಾನಾಮಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

<u>ವಿತ್ತೀಯ ಕಾರ್ಯನೀತಿ ಸಂಸ್ಥೆಯ (ವಿಕಾಸಂ) ಸಂಕ್ಷಿಪ್ತ ಪರಿಚಯ:-</u> ಯೋಜನಾ ಆಯೋಗದ ನೆರವಿನೊಂದಿಗೆ ಕರ್ನಾಟಕ ಸರ್ಕಾರವು 2007ನೇ ಸಾಲಿನಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಿತು. ಈ ಸಂಸ್ಥೆಯು ಆರ್ಥಿಕ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರದ ಅಧಿಕಾರಿಗಳಿಗೆ, ವಿತ್ತೀಯ ನೀತಿ ಮತ್ತು ಕಾರ್ಯಾಚರಣೆಗಳ ಬಗ್ಗೆ ಹಾಗೂ ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ಸಾರ್ವಜನಿಕ ಹಣಕಾಸು ನಿರ್ವಹಣೆ ಬಗ್ಗೆ, ವ್ಯವಸ್ಥಿತವಾದ ತರಬೇತಿ ನೀಡುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಸಲಹೆಗಳನ್ನು ಸಹಾ ವಿಕಾಸಂನಿಂದ ನಿರೀಕ್ಷಿಸಲಾಗುತ್ತದೆ.

<u>ಹುದ್ದೆಯ ಕಾರ್ಯ ನಿರೀಕ್ಷೆ:</u>

ಆಯ್ಕೆಯಾದ ಸಂಶೋಧನಾ ಫೆಲೋ (RF), ಸಂಶೋಧನಾ ಅಸೋಸಿಯೇಟ್ ಗಳು (RA) ಮತ್ತು ಸಂಶೋಧನಾ ಸಮಾಲೋಚಕರು (RC) ವಿತ್ತೀಯ ಕಾರ್ಯನೀತಿ ಸಂಸ್ಥೆ ನಿರ್ಧರಿಸಿದ ವಿಷಯಗಳನ್ನು ಕುರಿತು ಸಂಶೋಧನೆ / ಕ್ಷೇತ್ರ ಅಧ್ಯಯನಗಳನ್ನು ಕೈಗೊಳ್ಳಬೇಕಾಗುತ್ತದೆ. ಅಲ್ಲದೇ ಸಂಸ್ಥೆಯ ತರಬೇತಿ ಚಟುವಟಿಕೆಗಳಿಗೆ, ಮಹಿಳಾ / ಮಕ್ಕಳ ಉದ್ದೇಶಿತ ಆಯವ್ಯಯ ತಯಾರಿಕೆಗೆ ಅಗತ್ಯವಿದ್ದಾಗ ಸಹಕರಿಸಬೇಕು. ಇದರೊಂದಿಗೆ ಆಯ್ಕೆಯಾದ ಅಭ್ಯರ್ಥಿಗಳು ಮಾಹಿತಿಗಳ ಸಂಗ್ರಹಣೆ ಮತ್ತು ನಿರ್ವಹಣೆ, ದಾಖಲೆಗಳನ್ನು ಸಿದ್ಧಪಡಿಸುವುದು, ವರದಿಗಳನ್ನು ಬರೆಯುವುದು, ಅಂಕಿ ಅಂಶಗಳ ವಿಶ್ಲೇಷಣೆಯಲ್ಲಿ ತೊಡಗಿಸಿಕೊಳ್ಳುವುದು, ಉದ್ದೇಶಿತ ತರಬೇತಿ ಚಟುವಟಿಕೆಗಳ ಸಂಯೋಜನೆ, ಹಣಕಾಸು ವಿಷಯ ಕುರಿತಂತೆ ಮಾದರಿ ಪಠ್ಯಕ್ರಮಗಳ ಅಭಿವೃದ್ಧಿ, ವೆಬ್-ಸೈಟ್ ನಿರ್ವಹಣೆ ಮುಂತಾದವುಗಳನ್ನು ಮಾಡಬೇಕಿದೆ. ಅಗತ್ಯವಿದ್ದಾಗ ಬೆಂಗಳೂರಿನ ಹೊರಗೆ ಪ್ರವಾಸ ಮಾಡಬೇಕಾಗಬಹುದು.